

ಅಮೆರಿಕದ ನಯಾಗರಕ್ಕೆ ಸಮೀಪದಲ್ಲಿರುವ ಲೆಚ್‌ವರ್ತ್ ಉದ್ಯಾನವನ ರೊಚೆಸ್ಟರ್ ನಗರದಿಂದ 56 ಕಿ.ಮೀ ದೂರದಲ್ಲಿದೆ. ಉದ್ಯಾನವನ ಸಮೀಪಿಸುತ್ತಿದ್ದಂತೆ, 'ರಸ್ತೆ ದುರಸ್ತಿಯಲ್ಲಿದೆ, ಬದಲಿ ರಸ್ತೆ ಬಳಸಿ' ಎಂಬ ಫಲಕ ಪ್ರಧಾನವಾಗಿ ಕಾಣಿಸಿತು. ಬದಲಿ ರಸ್ತೆಯಲ್ಲಿ ಕಾರ್ ಓಡಿಸುವಾಗ ಯಾರ ನೆರವನ್ನು ಕೋರುವ ಅವಶ್ಯಕತೆಯೂ ಬರಲಿಲ್ಲ. ಎಲ್ಲಾ ತಿರುವುಗಳಲ್ಲೂ, ಸ್ವಲ್ಪವೂ ಗೊಂದಲವಾಗದಂತೆ ಹಾದಿ ತೋರಿಸುವ ಫಲಕಗಳಿದ್ದವು. ಹಾಗೆ ನೋಡಿದರೆ ಇಲ್ಲಿ ದಾರಿ ಕೇಳಲು, ಒಂದು ನರಪಿಳ್ಳೆಯು ಕಾಣಸಿಗುವುದಿಲ್ಲ. ನಾಗಾಲೋಟದಲ್ಲಿ ಓಡುವ ಕಾರುಗಳ ಕಾರುಬಾರು ಮಾತ್ರ ರಸ್ತೆಯಲ್ಲಿ ಕಂಡುಬರುತ್ತಿತ್ತು.

ಲೆಚ್‌ವರ್ತ್ ಪಾರ್ಕ್‌ನ ಮೂಲಕ ಜೆನಿಸಿ ಎಂಬ ಹೆಸರಿನ ನದಿ ಬಿಂಕ ಬಿನ್ನಾಣದಿಂದ, ಕಡಿದಾದ ಹಾಗೂ ಆಳವಾದ ಕಣಿವೆಯಲ್ಲಿ ಹರಿಯುತ್ತದೆ. ಕೆಲವು ಸ್ಥಳಗಳಲ್ಲಿ, ಕಣಿವೆಯ ಆಳ 500 ಅಡಿಗೂ ಮಿಗಿಲಾಗಿದ್ದು, ಬಗ್ಗಿ ನೋಡುವಾಗ ಹೃದಯ ಬಡಿತ ಹೆಚ್ಚಾದರೆ ಆಶ್ಚರ್ಯವೇನಿಲ್ಲ. ಜೆನಿಸಿ ಕಣಿವೆಯನ್ನು 'ಪೂರ್ವದ ಗ್ರ್ಯಾಂಡ್ ಕೇನಿಯಾನ್' ಎಂದೂ ಕರೆಯುತ್ತಾರೆ. ಉದ್ಯಾನದೊಳಗೆ ಈ ನದಿ ಮೂರು ಸ್ಥಳಗಳಲ್ಲಿ ಧುಮುಕುವುದರಿಂದ ಮೂರು ಜಲಪಾತಗಳು ಸೃಷ್ಟಿಯಾಗಿವೆ. ಇವುಗಳನ್ನು 'ಮೂವರು ಸಹೋದರಿಯರು' ಎಂದು ಕರೆಯುತ್ತಾರೆ.

ಮಧ್ಯೆ ಇರುವ ಸಹೋದರಿ ಹೆಚ್ಚು ಆರ್ಭಟ ಹಾಗೂ ಎತ್ತರದಿಂದ (ಸುಮಾರು ನೂರು ಅಡಿಗಿಂತ ಹೆಚ್ಚು) ಧುಮುಕುವುದರಿಂದ, ಪ್ರವಾಸಿಗರು ಹೆಚ್ಚು ಸಮಯ ಇಲ್ಲಿಯೇ ಕಳೆಯುತ್ತಾರೆ. ಈ ಜಾಗದಲ್ಲಿ ನದಿಯ ಪಾತ್ರವು ಕಿರಿದಾಗಿದೆ. ನಾವು ಜಲಪಾತವನ್ನು ವೀಕ್ಷಿಸುವ ವೇಳೆಯಲ್ಲಿ, ಜಲಪಾತವು ಕಾಮನಬಿಲ್ಲಿನಿಂದ ಶೃಂಗಾರಗೊಂಡಿತ್ತು. ಜಲಪಾತವನ್ನು ಅನೇಕ ಕೋನಗಳಿಂದ ನೋಡಲು ವ್ಯವಸ್ಥೆಯಿದೆ. ಮೇ ತಿಂಗಳಿನಿಂದ ಅಕ್ಟೋಬರ್‌ವರೆಗೂ, ಕತ್ತಲಾದ ನಂತರ, ದೀಪಾಲಂಕೃತ ವರ್ಣರಂಜಿತ ಜಲಪಾತವನ್ನು ನೋಡಿ ಕಣ್ತುಂಬಿಕೊಳ್ಳಬಹುದು.

ಪ್ರವಾಸಿಗಳಿಗೆ ಕೊಂಚ ವಿರಮಿಸಲು ಹುಲ್ಲು ಹಾಸಿನ ಪಾರ್ಕ್ ಹಾಯೆನಿಸುವಂತಿದೆ. ತಿಂಡಿ ತಿನಿಸುಗಳಿಗಾಗಿ ಸುಸಜ್ಜಿತ 'ಈಟರೀ' ವ್ಯವಸ್ಥೆಗಳಿವೆ. ಪಕ್ಕದಲ್ಲೇ ಲಕ ಲಕ ಹೊಳೆಯುವ ವಾಷ್‌ರೂಮ್, ವಾಷ್‌ಬೇಸಿನ್‌ಗಳು, ಕೈ ಒರೆಸಿಕೊಳ್ಳಲು ಟಿಶ್ಯು ಪೇಪರ್ ಡಿಸ್ಪೆನ್ಸರ್, ಒದ್ದೆ ಕೈಗಳನ್ನು ಒಣಗಿಸಲು ಬಿಸಿಗಾಳಿ ಉಗುಳುವ ಯಂತ್ರಗಳೂ ಇವೆ. ನಮ್ಮಲ್ಲಿ ಸಾರ್ವಜನಿಕ ಪಾರ್ಕ್‌ಗಳಲ್ಲಿ ಇಷ್ಟೊಂದು ವ್ಯವಸ್ಥಿತ ಶೌಚಾಲಯ ಕನಸಿನ ಮಾತೇ ಸರಿ.

ಇಲ್ಲಿನ ಮ್ಯೂಸಿಯಂನಲ್ಲಿ ಲೆಚ್‌ವರ್ತ್ ಸ್ಟೇಟ್ ಪಾರ್ಕ್‌ನ ಐತಿಹ್ಯ ತಿಳಿಯಿತು. 1906 ರಲ್ಲಿ ಲೆಚ್‌ವರ್ತ್ ಎಂಬ ಉದ್ಯಮಿ ಸಾವಿರ ಎಕರೆ ವಿಸ್ತೀರ್ಣದ ಎಸ್ಟೇಟ್ ಅನ್ನು ನ್ಯೂಯಾರ್ಕ್ ರಾಜ್ಯಕ್ಕೆ ದಾನ ಮಾಡಿದ. ರಾಜ್ಯ ಸರ್ಕಾರ ಸುತ್ತಮುತ್ತಲಿನ ಪ್ರದೇಶಗಳನ್ನು ಸೇರಿಸಿ 14,000 ಎಕರೆ ವಿಸ್ತಾರದ ಉದ್ಯಾನವನವನ್ನು ಅಭಿವೃದ್ಧಿಪಡಿಸಿತು. ಜೊತೆಗೆ ದಾನಿಯಾದ ಲೆಚ್‌ವರ್ತ್‌ರವರ ಹೆಸರನ್ನೇ ಉದ್ಯಾನವನಕ್ಕೆ ಇಟ್ಟಿತು ಎನ್ನುವ ವಿವರಣೆ ಹೆಮ್ಮೆ ಮೂಡಿಸುವಂಥದು.

ಉದ್ಯಾನವನದಲ್ಲಿ ಪ್ರವಾಸಿಗರಿಗೆ ಇತರ ಆಕರ್ಷಣೆಗಳೆಂದರೆ, ಹೈಕಿಂಗ್ ಟ್ರೇಲ್, ಏಗ್ಲಿಂಗ್, ಕಯಾಕಿಂಗ್, ರೇಫ್ಟಿಂಗ್, ಬಿಸಿಗಾಳಿ ಬಲೂನ್ ರೈಡ್, ಟೆಂಟ್‌ನಲ್ಲಿ ವಾಸ್ತವ್ಯ ಇತ್ಯಾದಿ.